

### ಬಾರ್ಬಿ: ಒಂದಷ್ಟು ವಿಶೇಷ ಸಂಗತಿಗಳು

★ ಮಾರ್ಚ್ 9ನ್ನು ಬಾರ್ಬಿಯ ಜನ್ಮದಿನವನ್ನಾಗಿ ಆಚರಿಸಲಾಗುತ್ತದೆ.
★ ಮೊದಲ ಬಾರ್ಬಿ ಗೊಂಬೆಯ ಬೆಲೆ ಮೂರು ಡಾಲರ್ ಆಗಿತ್ತು.
★ ಬಾರ್ಬಿಯ ಹುಟ್ಟಿಗೆ ಪ್ರೇರಕವಾಗಿದ್ದ 'ಬಿಲ್ಡ್ ಲಿಲ್ಲಿ' ಗೊಂಬೆ ಉತ್ಪಾದನೆಯ ಹಕ್ಕನ್ನು 'ಮೆಟೆಲ್' 1964ರಲ್ಲಿ ಖರೀದಿಸಿತು.
★ 'ಬಾರ್ಬಿ ದಿ ನಟ್ ಕ್ರಾಕರ್–' ಬಾರ್ಬಿಯ ಕುರಿತಾದ ಮೊದಲ ಸಿನೆಮಾ 2001ರಲ್ಲಿ ತೆರೆಕಂಡಿತು.
★ 1994 ರಲ್ಲಿ 'ಡ್ರೀಮ್ ಡಾಲ್' ಹೆಸರಿನ ಕೃತಿಯನ್ನು ಶ್ಯಾನನ್ ಹೆಸರಿನ ಲೇಖಕಿಯೊಂದಿಗೆ ಸೇರಿ ರುತ್ ಹ್ಯಾಂಡ್ಲರ್ ರಚಿಸಿದರು.
★ ಇದುವರೆಗೆ ಸಾವಿರಕ್ಕೂ ಅಧಿಕ ವಿನ್ಯಾಸದ ಶೂಗಳನ್ನು ಬಾರ್ಬಿಗಾಗಿ ತಯಾರಿಸಲಾಗಿದೆ.
★ ಪ್ರಸ್ತುತ ಪ್ರತೀ ಹತ್ತು ಸೆಕೆಂಡಿಗೊಂದು ಬಾರ್ಬಿ ಗೊಂಬೆ ಮಾರಾಟವಾಗುತ್ತಿದೆ.
★ ಬಾರ್ಬಿ ಹೆಸರಿನಲ್ಲಿರುವ ಯು ಟ್ಯೂಬ್ ಚಾನೆಲ್‌ಗೆ 49 ಲಕ್ಷಕ್ಕೂ ಅಧಿಕ ಸದಸ್ಯರಿದ್ದಾರೆ.
★ 2015ರಲ್ಲಿ ಸುಮಾರು 15 ಸಾವಿರಕ್ಕೂ ಅಧಿಕ ರೀತಿಯ ಬಾರ್ಬಿ ಬೊಂಬೆಗಳ ಸಂಗ್ರಹ ಹೊಂದಿರುವ ಜರ್ಮನಿಯ ಬೆಟ್ಟಿನಾ ಡಾರ್ಫ್‌ಮನ್ ಹೆಸರು ಗಿನ್ನೆಸ್ ದಾಖಲೆ ಪುಸ್ತಕದಲ್ಲಿ ದಾಖಲಾಗಿದೆ.

ಬಂದವು. 'ಮಿಜ್' ಬಾರ್ಬಿಯ ಪ್ರಾಣಸ್ನೇಹಿತೆಯಾಗಿ ಪರಿಚಯಿಸಲ್ಪಟ್ಟರೆ ಮೈಕ್, ವೈಟ್ನಿ, ನಿಕ್ಕಿ, ಡೇವ ಉಳಿದ ಸ್ನೇಹಿತರು. 1961ರಲ್ಲಿ ಕೆನ್ ಹೆಸರಿನ ಗೊಂಬೆಯು ಬಾರ್ಬಿಯ ಜೊತೆಗಾರನಾಗಿ ಮಾರುಕಟ್ಟೆಗೆ ಬಂದು ಹೊಸ ಕತೆಗಳಿಗೆ ನಾಂದಿ ಹಾಡಿತ್ತು. ಅಂದಹಾಗೆ, ಬಾರ್ಬಿಯ ತಂದೆ ತಾಯಿಗಳ ರೂಪದಲ್ಲಿ ಮಾತ್ರ ಗೊಂಬೆಗಳು ಇನ್ನೂ ಮಾರುಕಟ್ಟೆಗೆ ಬಂದಿಲ್ಲ.

### ಕಪ್ಪು ಬಣ್ಣದ ಬಾರ್ಬಿ

ಬಾರ್ಬಿ ಎಂದಾಕ್ಷಣ ನಮ್ಮ ಮನಸ್ಸಿಗೆ ಬರುವುದು ಬಿಳಿಯ ಬಣ್ಣದ ಚೆಂದದ ಗೊಂಬೆ. ಆದರೆ ಇದೇ ಕಾರಣಕ್ಕಾಗಿ ಬಾರ್ಬಿಯ ವಿರುದ್ಧ ಟೀಕೆಗಳು ಕೇಳಿಬಂದವು. ಬಾರ್ಬಿ ಒಂದು ನಿರ್ದಿಷ್ಟ ಜನಾಂಗವನ್ನು ಮಾತ್ರ ಪ್ರತಿನಿಧಿಸುತ್ತಾಳೆ ಎನ್ನುವುದು ಪ್ರಮುಖ ಟೀಕೆ. ಆ ಕೊರತೆಯನ್ನು ಹೋಗಲಾಡಿಸಲು 1968ರಲ್ಲಿ 'ಕ್ರಿಸ್ಟಿ' ಹೆಸರಿನ ಗೊಂಬೆಯನ್ನು ಪ್ರಥಮ ಆಫ್ರಿಕಾ –ಅಮೆರಿಕನ್ ಬಾರ್ಬಿ ಗೊಂಬೆಯಾಗಿ 'ಮೆಟೆಲ್' ಪರಿಚಯಿಸಿತು.

### ಸೈಜ್ ಸರಿಯಿಲ್ಲ ಅಂದ್ರು!

ತನ್ನ ಆಕರ್ಷಕ ಲುಕ್‌ನಿಂದ ಮಕ್ಕಳ ಜೊತೆಜೊತೆಗೆ ಹದಿಹರೆಯದವರ, ಮಹಿಳೆಯರ ಮನಸೂರೆಗೊಂಡಿದ್ದ ಬಾರ್ಬಿ ಗೊಂಬೆಯಂತಹ ದೇಹವನ್ನು ಹೊಂದಲು ಹಲವರು ತಲೆಕೆಡಿಸಿಕೊಂಡಿದ್ದರು. ಈ ಪ್ರಯತ್ನದಲ್ಲಿ ಕೆಲವರು ಅನಾರೋಗ್ಯಕ್ಕೂ ತುತ್ತಾಗಿದ್ದರು.

1971ರ ವೇಳೆಗೆ ಅದರ ದೇಹ ರಚನೆಯನ್ನು ವಿರೋಧಿಸಿ ಪ್ರತಿಭಟನೆಗಳು ನಡೆದಿದ್ದವು. ಮುಂದೆ ಫಿನ್ಲೆಂಡ್‌ನ ಹೆಲ್ಸಿಂಕಿಯಲ್ಲಿನ 'ಯೂನಿವರ್ಸಿಟಿ ಸೆಂಟ್ರಲ್ ಹಾಸ್ಪಿಟಲ್' ಬಾರ್ಬಿಯ ದೇಹರಚನೆ ಸರಿಯಿಲ್ಲ ಎಂದು ಕಾರಣ ಸಮೇತ ಪ್ರತಿಪಾದಿಸಿತು. ಅದರ ಎತ್ತರ ಮತ್ತು ಅದರ ದೇಹದ ವಿವಿಧ ಭಾಗಗಳ ಹೊಂದಾಣಿಕೆ ಅಸಹಜವಾದುದು ಎಂದಿತ್ತು. ಪುಲಿಟ್ಜರ್ ಪ್ರಶಸ್ತಿ ವಿಜೇತ ಕೆರೋಲ್ ಶೀಲ್ಡ್ಸ್, ಅನ್ನಾ ಸೇರಿದಂತೆ ಅನೇಕ ಬರಹಗಾರರು ಬಾರ್ಬಿಯ ದೇಹರಚನೆಯ ವಿನ್ಯಾಸವನ್ನು ವಿರೋಧಿಸಿದರು. ಕೊನೆಗೆ ಒತ್ತಡ ತಾಳಲಾರದೆ 1998ರಲ್ಲಿ ಬಾರ್ಬಿಯ ಅಂಗಾಂಗ ವಿನ್ಯಾಸವನ್ನು ಸಂಪೂರ್ಣವಾಗಿ ಬದಲಾಯಿಸಲಾಯಿತು. ಅಷ್ಟಾಗಿಯೂ ಬಾರ್ಬಿಯ ಬೇಡಿಕೆ ಕುಗ್ಗಲಿಲ್ಲ.

### ಬಾರ್ಬಿಯ ಏಳುಬೀಳು

ಬಾರ್ಬಿಯ ಡ್ರೆಸ್ ಕೋಡ್ ಇಸ್ಲಾಂ ಧರ್ಮದ ತತ್ವಗಳಿಗೆ ವಿರುದ್ಧವಾಗಿದೆ ಎನ್ನುವ ಕಾರಣ ನೀಡಿ 1995ರಲ್ಲಿ ಸೌದಿ ಅರೇಬಿಯಾ ಬಾರ್ಬಿಯ ಮಾರಾಟವನ್ನು ತನ್ನ ದೇಶದಲ್ಲಿ ನಿಷೇಧಿಸಿತ್ತು. ಅದಕ್ಕೆ ಬದಲಾಗಿ ಒಂದೆರಡು ಗೊಂಬೆಗಳನ್ನು ಅಲ್ಲಿ 'ಮೆಟೆಲ್' ಪರಿಚಯಿಸಿತಾದರೂ ಅದಾಗಲೇ ಅಲ್ಲಿ ಬೇಡಿಕೆ ಗಳಿಸಿಕೊಂಡಿದ್ದ ಬೇರೊಂದು ಕಂಪೆನಿಯ 'ಫುಲ್ಲಾ' ಹೆಸರಿನ ಗೊಂಬೆಯೆದುರು ಬಾರ್ಬಿ ಸೋತಿತ್ತು. 2001ರಲ್ಲಿ 'ಬ್ರಾಟ್ಸ್' ಗೊಂಬೆಗಳು ಮಾರುಕಟ್ಟೆಗೆ ಬಂದಾಗ ಯುರೋಪಿನಲ್ಲಿ ಬಾರ್ಬಿಯ ಮಾರಾಟ ಕುಸಿತ ಕಂಡಿತ್ತು. 'ಬ್ರಾಟ್ಸ್' ಗೊಂಬೆಗಳ ರೂವಾರಿ ಕಾರ್ಟರ್ ಮೊದಲು ಕೆಲಸ ಮಾಡುತ್ತಿದ್ದುದು ಬಾರ್ಬಿ ತಯಾರಿಸುತ್ತಿದ್ದ 'ಮೆಟೆಲ್' ಕಂಪೆನಿಯಲ್ಲೇ.

### ಬಾರ್ಬಿ ಸಿಂಡ್ರೋಮ್

ಇಂದು ಬಾರ್ಬಿ ಗೊಂಬೆ ಜನರ ಮೇಲೆ ಎಷ್ಟೆಲ್ಲ ರೀತಿಯಲ್ಲಿ ಪರಿಣಾಮ ಬೀರಿದ್ದಾಳೆನ್ನುವುದು ಕಲ್ಪನೆಗೆ ನಿಲುಕದ ಸಂಗತಿ. ಬಾರ್ಬಿ ಲಕ್ಷಗಟ್ಟಲೆ ಜನರ ಜೀವನದ ಅವಿಭಾಜ್ಯ ಅಂಗವೇ ಆಗಿ ಹೋಗಿದ್ದಾಳೆ. ಅಮೇರಿಕ, ಯುರೋಪ್, ಏಷ್ಯಾ ಸೇರಿದಂತೆ ವಿಶ್ವದ ನೂರ ಐವತ್ತಕ್ಕೂ ಹೆಚ್ಚು ದೇಶಗಳಲ್ಲಿ ಬಾರ್ಬಿ ಮಾರಾಟವಾಗುತ್ತಿದೆ. ಆಕೆಯ ಹೆಸರಿನಲ್ಲಿ ಅನೇಕ ಸಿನಿಮಾಗಳು ತೆರೆಕಂಡಿವೆ. ಸಾಕ್ಷ್ಯಚಿತ್ರಗಳು ಬಂದಿವೆ. ಹಾಡುಗಳು ಕೇಳಿಸಿವೆ. ಕಮಾನ್ ಬಾರ್ಬಿ. ಲೆಟ್ಸ್ ಗೋ ಬಾರ್ಬಿ' ಹಾಡಂತೂ ಜನರಲ್ಲಿ ವಿಚಿತ್ರ ಕ್ರೇಜ್ ಸೃಷ್ಟಿಸಿತ್ತು.

ಬಾರ್ಬಿಗೆ ಸಂಬಂಧಿಸಿದಂತೆ ವೆಬ್‌ನಲ್ಲಿ ನೂರಾರು ಆಟಗಳು ಬಂದಿವೆ. ಇಂಗ್ಲಿಷ್‌ನಲ್ಲಿ ಕಾದಂಬರಿಗಳು ರಚನೆಯಾಗಿವೆ. ಇವತ್ತು ಬಾರ್ಬಿ ಗೊಂಬೆಯ ಒಂದು ಲಕ್ಷಕ್ಕಿಂತ ಅಧಿಕ ಸಂಗ್ರಾಹಕರಿದ್ದು, ಅವರಲ್ಲಿ ಶೇಕಡ 90 ಮಹಿಳೆಯರೇ ಇದ್ದಾರೆ.

ಬಾರ್ಬಿ ಇಂದು ಕೇವಲ ಒಂದು ಗೊಂಬೆಯಾಗಿ ಮಾತ್ರ ಉಳಿದಿಲ್ಲ. ಅವಳೊಂದು ಸಾಂಸ್ಕೃತಿಕ ಕೊಂಡಿಯಾಗಿದ್ದಾಳೆ. ಅಕ್ಕನಾಗಿ, ತಂಗಿಯಾಗಿ, ಸ್ನೇಹಿತೆಯಾಗಿ, ರೂಪಕ್ಕೆ ಒಂದು ಆದರ್ಶವಾಗಿ ಜನರೊಡನೆ ಬೆರೆತು ಹೋಗಿದ್ದಾಳೆ. ಉಕ್ರೇನಿನಲ್ಲಿರುವ 'ವೆಲೇರಿಯಾ ಲುಕಿನೋವಾ' ಎನ್ನುವ ತರುಣಿಯಂತೂ ಥೇಟ್ ಬಾರ್ಬಿ ಮಾದರಿಯಲ್ಲೇ ಮೇಕಪ್ ಮಾಡಿಕೊಂಡು ವಿಶ್ವದ ಗಮನ ಸೆಳೆಯುತ್ತಿದ್ದಾಳೆ. ಹಾಗೆ ಮೇಕಪ್ ಮಾಡಿಕೊಳ್ಳಲಿಕ್ಕಾಗಿ ಆಕೆ ದಿನವೂ ಬರೋಬ್ಬರಿ ಎರಡೂವರೆ ಗಂಟೆ ತೆಗೆದುಕೊಳ್ಳುತ್ತಾಳಂತೆ. ಅದು ಬಾರ್ಬಿ ಕ್ರೇಜ್.